It has been stated that in order to function as an Opposition, there should at least be a capacity to conduct the business of the House without having to rely on other members outside the party. A working rule that has been evolved in the several Legislatures in India is that there should at least be sufficient number of members to form a quorum.

What I have been saying all along is in relation to a party. Where no such party is forthcoming, the practice has sprung up of recognising groups. The main difference of course is that while there can be only one Opposition party, there can be several Opposition groups. In our House, as a matter of fact, there is only one party or group which consists of 7 members, the remaining members who do not belong to the Congress not being a group or party. It will be seen that unless some minimum number is fixed, all other conditions may be satisfied and yet we may have a group or party of just 2 or 3 members claiming recognition. I may add that this question was discussed at great length at a Conference of Presiding Officers held at Srinagar in 1954. The consensus of opinion was that while conditions in India were fluid and no particular rule regarding numbers could be laid down, it was necessary that some minimum should be fixed for a party and lower number for a group. In the Lok Sabha, the minimum required for a party is the quorum and for a group it is 30.

Taking into account all these several considerations, I am of the view that while the P.S.P. with its present membership cannot be called a party, it has to be recognised as a group. However as there is only one group in this House in the Opposition and as Sri Imam is the Opposition Leader, I am of the view that he is the Opposition Leader of the only Group in the Opposition and therefore the Leader of the Opposition.

Members' Representations.

Sri J. MOHAMED IMAM (Jagalur).— A representation was made yesterday by some of my friends whether the speeches made by me on the S.R.C. Report should be treated as the speeches made from Sri J. Mohamed Imam or as from the Leader of the Opposition. I would request the Chair to kindly treat my speeches, when they are forwarded to the Central Government, as the speeches, from the Leader of the Opposition.

Sri M. PALANIYAPPAN (Ulsoor).— I want to make a representation to the Speaker regarding the issue of passes to the Speaker's Gallery and the Visitors' Gallery. Sir, while issuing passes to the different Galleries of the Hoouse, most irregularities are being committed. Several times the Members had to receive a negative reply for passes. This morning, when I went to the tent where the passes are being issued, the clerk was missing from the tent and somebody directed me to go to the office and there also I was unable to get the passes. Likewise, I had to go up and down for several times and thereby I wasted 15 minutes. This is not the first time that I have experienced this handicap. Some of my other honourable friends have experienced the same difficulty. We will be getting some friends to witness the discussion of the Assembly.

Sometimes the passes issued on the 18th and 19th are being issued today. I do not know whether it is the mistake of the clerk concerned or some other body. Such things are happening day in and day out. In order to obviate all these troubles, I would just request the Chair to kindly see that the members of this House are shown due consideration while issuing passes to their friends. I think most of the members like me have been disappointed and they were unable to get the passes. When important discussions like the S.R.C. Report are held in the Assembly so many people would like to witness the discussion. On such occasions necessary arrangements should be made for the issue of passes.

I would like to draw the attention of the Chair to another important matter, *viz.*, the distribution of questions and answers. These questions and answers will be given to the members just at

(SRI M. PALANIYAPPAN.)

the commencement of the sessions. In Mysore also the same practice prevailed. The printed questions and answers would be received sufficiently in advance in the office. But I find unfortunately those things would be supplied to us a little bit late. Unless these things are supplied to us at least one day prior, it would not be possible for us to study the questions and apply our minds.

Mr. SPEAKER.—Regarding the first point raised by the Hon'ble Member about the issue of passes, as the Hon'ble Members are aware, due to special circumstances it has not been possible to issue passes to all the people, and if there are any defects, they will be looked into. So far as the distribution of questions and answers is concerned, I will see that they are made available to them a little bit earlier.

STATES REORGANISATION COMMISSION REPORT

Motion to consider—(contd.)

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಮಾನ್ಯ ಸಭಾಪತಿಗಳೇ, ಈವರೆಗೂ ಎಸ್. ಆರ್. ಸಿ. ವರದಿಯ ಮೇಲೆ ಚರ್ಚೆ ಮಾಡಿರುವ ರೀತಿಗೂ ಈ ದಿವಸ ಈ ರಿಪೋರ್ಟಿನ ಮೇಲೆ ಚರ್ಚೆಮಾಡುವಾಗ ಇರತಕ್ಕ ಮನೋಭಾವಕ್ಕೂ ವ್ಯತ್ಯಾಸವುಂಟಾಗಿದೆಯೆಂಬುದನ್ನು ನಾನು ಅರಿತಿದ್ದೇನೆ. ಪತ್ರಿಕೆಗಳಲ್ಲಿ ಬಂದಿರತಕ್ಕ ರೀತಿಯಲ್ಲಿ ಹೈ-ಪವರ್ ಕಮಿಟಿಯವರು ಏನು ತೀರ್ಮಾನ ಮಾಡಿದ್ದಾರೆಂಬ ವಿಷಯವನ್ನೂ ನಾನು ಓದಿದ್ದೇನೆ. ಆದರೂ ಕೂಡ ಲೆಜಿಸ್ಲೇಚರಿನಲ್ಲಿ ಈ ವಿಷಯ ಚರ್ಚೆಯಾಗಿ ತೀರ್ಮಾನವಾಗಬೇಕಾಗಿರತಕ್ಕ ನಿವೇಶದಲ್ಲಿ ನಾವಿದ್ದೇವೆ. ಈಗ ಚರ್ಚೆ ಮಾಡಿ ನಮ್ಮ ಅಭಿಪ್ರಾಯಗಳನ್ನು ಖಚಿತವಾಗಿ ತಿಳಿಸಬೇಕಾಗಿದೆ.

ಈ ರಿಪೋರ್ಟನ್ನು ಚರ್ಚೆ ಮಾಡುವಾಗ ಅದರ ಪೂರ್ವಭಾವಿಯಾಗಿ ಒಂದೆರಡು ಮಾತುಗಳನ್ನು ತಿಳಿಸಬೇಕೆಂದಿದ್ದೇನೆ. S.R.C ರಿಪೋರ್ಟು 10-10-55 ರಲ್ಲಿ ಪ್ರಕಟವಾಯಿತು. ಅಂದಿನಿಂದ ಈವರೆಗೂ ಈ ವರದಿಯ ಮೇಲೆ, ಕರ್ನಾಟಕ ಪ್ರಾಂತ್ಯ ರಚನೆಯಾಗತಕ್ಕ ವಿಷಯದಲ್ಲಿ, ಅದು ಅನಗತ್ಯವೆಂದು ಹೇಳಿ ಎಂಥ ಪರಿಣಾಮಕಾರಿಯಾದಂಥ ನಿವೇಶಗಳು ಬಂದಿವೆಯೆಂಬುದು ಈ ಸಭೆಗೆ ಗೊತ್ತಿದೆ. ಅಕ್ಟೋಬರ್ ತಿಂಗಳ 10ನೆಯ ತಾರೀಖು ಆದಮೇಲೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸಿನ ಅಧ್ಯಕ್ಷರವರು ಇಡೀ ಮೈಸೂರು ಸಂಸ್ಥಾನದ ಪ್ರವಾಸವನ್ನು ಕೈಕೊಂಡರು. ಅದಾದನಂತರ ಚರ್ಚೆಗಾಗಿ ಈ ಸಭೆಯನ್ನು ಕರೆಯಲಾಯಿತು. ಆ ಕಾಂಗ್ರೆಸ್ ಅಧ್ಯಕ್ಷರು ಮೈಸೂರು ಸಂಸ್ಥಾನದಲ್ಲಿ ಪ್ರವಾಸವನ್ನು ಕೈಕೊಂಡ ಕಾಲದಲ್ಲಿ ಉಂಟಾದ ಸನ್ನಿವೇಶಗಳೂ ಮತ್ತು ಈ ಸಭೆಯು ಪ್ರಾರಂಭವಾದಾಗ ನಡೆದ ಪ್ರಸಂಗಗಳೂ ನಮ್ಮ ಕಣ್ಣೆದುರಿಗೆ ನಿಂತಿವೆ. ನಾವು ಈ ದೇಶದ ಸ್ವಾತಂತ್ರ್ಯವನ್ನು ಗಳಿಸತಕ್ಕ ಹೋರಾಟದ ಸಂದರ್ಭದಲ್ಲಿ ಬ್ಯೂರೋಕ್ರಾಟಿಕ್ ಸರ್ಕಾರವೆಂದು ಹೇಳಿ ಪ್ರಜೆಗಳು ಸರ್ಕಾರವನ್ನು ಎದುರಿಸಿ ಪ್ರಜಾಸರ್ಕಾರವನ್ನು ಸ್ಥಾಪನೆ ಮಾಡಲೋಸುಗ ಹೋರಾಟ ನಡೆಸಬೇಕೆಂದೇನು ಹೇಳುತ್ತಿದ್ದೆವೋ ಅದೇ ರೀತಿ ಪ್ರಾಂತ್ಯ ವಿಂಗಡಣೆಯ ಈ ಸಂದರ್ಭದಲ್ಲಿ ಪ್ರಜೆಗಳಿಗೆ-ಪ್ರಜೆಗಳಿಗೆ, ಗುಂಪು-ಗುಂಪುಗಳಿಗೆ ಪಕ್ಷ-ಪಕ್ಷಗಳಿಗೆ ಜೊತೆಗೆ ಸರ್ಕಾರದೊಡನೆಯೂ ಕೂಡ ಹೋರಾಟ ನಡೆಸುವ ಸನ್ನಿವೇಶವೊದಗಿದೆ. ಇದನ್ನು ನಾನು ವಿಸ್ತರಿಸುವುದಕ್ಕೆ ಹೋಗುವುದಿಲ್ಲ. ಆ ಚಿತ್ರಗಳೆಲ್ಲವನ್ನೂ ನಾವು ಮನಸ್ಸಿನಲ್ಲಿಟ್ಟುಕೊಂಡು ಇಂದು ಚರ್ಚಿಸಬೇಕಾಗಿದೆ.

ಸ್ವಾಮಿ, ನಾನು ಈ ವರದಿಯನ್ನು ಚರ್ಚಿಸುವಾಗ ಯಾವ ಸ್ವಾರ್ಥವನ್ನಾಗಲಿ ಚಪಲತೆಯನ್ನಾಗಲಿ, ಮಹದಾಶೆಯನ್ನಾಗಲಿ ಮನಸ್ಸಿನಲ್ಲಿಟ್ಟುಕೊಂಡು ಆ ಉದ್ದೇಶದಲ್ಲಿ ಮಾತನಾಡುವುದಕ್ಕೆ ಹೋಗುತ್ತಿಲ್ಲ. ನನ್ನ ಮಾತುಗಳಲ್ಲಾಗಲಿ, ಭಾಷೆಯಲ್ಲಾಗಲಿ ಅಸಹ್ಯ ವರ್ತನೆಯನ್ನು ತೋರ್ಪಡಿಸುವುದಕ್ಕೆ ನಾನು ಪ್ರಯತ್ನ ಮಾಡುವುದಿಲ್ಲ. ನಾನೇನಿದ್ದರೂ, ಮೈಸೂರು ದೇಶದ 90 ಲಕ್ಷ ಪ್ರಜೆಗಳ—ಪಟ್ಟಣಗಳಲ್ಲಿ ತಾಲ್ಲೂಕ್ ಹೆಡ್‌ಕ್ವಾರ್ಟರುಗಳಲ್ಲಿ ವಾಸಮಾಡತಕ್ಕ ಜನವನ್ನು ಬಿಟ್ಟು ಹಳ್ಳಿಗಾಡಿನ ರೈತನ ವಿಷಯದಲ್ಲಿ—ಅವರು ಯಾವ ಕೋಮಿಗೇ ಸೇರಿರಲಿ—ಮುಖ್ಯವಾಗಿ ರೈತನ ವಿಷಯದಲ್ಲಿ ಮಾತನಾಡುವವನಾಗಿದ್ದೇನೆ. ಅವನಿಗೆ ಇದರಿಂದ ಸುಖ ದೊರೆಯುವುದೇ ಅಥವಾ ಆ ಸುಖ ಎಷ್ಟು ದಿವಸಗಳಲ್ಲಿ ಆತನಿಗೆ ದೊರೆಯಬಹುದು, ಮತ್ತು, ಆ ಸುಖ ದೊರೆಯುವವರೆಗೂ ಅವನು ಎಂಥ ಹಳಸು ಜೀವನವನ್ನು ಅನುಭವಿಸಬೇಕಾಗಿದೆ, ಆ ಹಳಸು ಜೀವನವನ್ನು ಅನುಭವಿಸಬೇಕಾದ ಕಾಲದ ಮಿತಿಯೇನೆಂಬುದನ್ನು ಯೋಚಿಸಿ ನಾನು ವರದಿಯನ್ನು ಚರ್ಚಿಸತಕ್ಕವನಾಗಿದ್ದೇನೆ. ಈ ಸಂದರ್ಭದಲ್ಲಿ ನಾನು ಪಟ್ಟಣಗಳ ವಿಷಯವನ್ನು ಏಕೆ ಕೈಬಿಟ್ಟಿದ್ದೇನೆ ಎಂದರೆ ಅವರು ಹಳ್ಳಿಗಾಡಿನ ಜನರ ವಿಷಯದಲ್ಲಿ ಕರುಣೆಯಿಲ್ಲದ ಜನಗಳು ಎನ್ನತಕ್ಕ ಮಟ್ಟದಲ್ಲಿ ಅವರ ರೀತಿ ನೀತಿಗಳಿವೆ. ಅವರು ಹಳ್ಳಿಗಾಡಿನ ಜನರ ವಿಷಯದಲ್ಲಿ ತೋರತಕ್ಕ ನಿರ್ದಯ ಆ ಜನಗಳ ಮನಸ್ಸಿಗೆ ತುಂಬ ವ್ಯಥೆಯನ್ನುಂಟುಮಾಡಿದೆಯಾದ್ದರಿಂದ ನಾನು ಅವರನ್ನು ಸೇರಿಸಿಲ್ಲ. ಪಟ್ಟಣಗಳಲ್ಲಿರತಕ್ಕ ಜನಗಳು ಎಲ್ಲ ವಿಧದಲ್ಲೂ ಸುಖಸಂತೋಷಗಳನ್ನು ಅನುಭವಿಸುತ್ತಿದ್ದಾರೆ. ಎಲ್ಲಾ ಸೌಕರ್ಯಗಳೂ ಅವರಿಗೆ ದೊರೆಯುತ್ತಿರುತ್ತವೆ. ಅವರಿಗೆ ಹಳ್ಳಿಗಾಡಿನವರ ಕಷ್ಟಗಳು ಯಾವುದೂ ಗೊತ್ತಾಗುತ್ತಿಲ್ಲ. ಈ ಕಾರಣ ಅವರು ತಮಗೆ ಇಷ್ಟ ಬಂದಂತೆ, ತಮಗೆ ಅನುಕೂಲವಾಗುವಂತೆ ಅಭಿಪ್ರಾಯಗಳನ್ನು ತಿಳಿಸುವುದರಲ್ಲಿ ಮಗ್ನರಾಗಿದ್ದಾರೆ. ಹಳ್ಳಿಗಾಡಿನವರ ಕಷ್ಟದಿಂದ ಸುಖವನ್ನು ಅನುಭವಿಸುತ್ತಾ, ಆ ಸುಖದಲ್ಲಿ ಹಳ್ಳಿಗಾಡಿನವರನ್ನು ಮರೆತಿದ್ದಾರೆಂದು ಹೇಳಿದರೆ ಸಾಕು.

ಇದನ್ನು ಇನ್ನು ಹೆಚ್ಚಿಗೆ ಬೆಳೆಸುವುದಿಲ್ಲ. ಈ ವರದಿಯ ಮೇಲೆ ಈ ಸಭೆಯ ನಾಯಕರು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಅವರೇ ಹೇಳಿದಂತೆ, ಅವರು ಈ ಸಭೆಯ ನಾಯಕರಾಗಿ ಮಾತನಾಡಿಲ್ಲ. ವೈಯಕ್ತಿಕವಾಗಿ ಹನುಮಂತಯ್ಯನವ